ಬಹಳ ಕಡಿಮೆ ಇದೆ ಎಂದು ಹೇಳಿದ್ದಾರೆ. ಈ ಒಂದು ಇಲಾಖೆಗೆ ಹೆಚ್ಚಿನ ರೀತಿಯಲ್ಲಿ ಪೋಲೀಸರನ್ನು ನೇಮಿಸಬೇಕಾಗಿದೆ. ಇವತ್ತಿನ ದಿವಸ ವಿಶೇಷವಾಗಿ ಎನ್.ಟಿ.ಟಿ.ಇ. ನಕ್ಸಲೈಟ್ಸ್ ಎಲ್ಲ ಬರುತ್ತಿದ್ದಾರೆ. ಈ ರೀತಿ ಬೇರೆ ಬೇರೆ ದುಷ್ಕರ್ಮಿಗಳು ಬರತಕ್ಕ ಸಂದರ್ಭದಲ್ಲಿ ಇಲಾಖೆಯನ್ನು ಬಲಪಡಿಸಬೇಕೆಂದು ಸೂಚನೆ ಕೊಟ್ಟಿದ್ದಾರೆ. ಈಗಾಗಲೇ 91-92 ನೇ ಸಾಲಿನಲ್ಲಿ ಕೆಲವು ಹುದ್ದೆಗಳನ್ನು ಭರ್ತಿ ಮಾಡತಕ್ಕ ಕಾರ್ಯಕ್ರಮ ಹಾಕಿ ಕೊಂಡಿದ್ದೇವೆ. ಆದರೂ ಅದು ಸಾಲದು. ಆದರೂ ಕೂಡ ಮೊನ್ನೆ ಕೇಂದ್ರದ ಗೃಹಮಂತ್ರಿಗಳಾದ ಜಾಕಬ್ ಅವರು ಬಂದಾಗ ಕೂಡ ಪೋಲೀಸ್ ಡಿಪಾರ್ಟ್‌ಮೆಂಟ್ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ನಲ್ಲಿರುವುದನ್ನು ತೆಗೆದು ಅದನ್ನು ಪ್ಲಾನ್ ಐಟಂನಲ್ಲಿ ಇನ್‌ಕ್ಲೂಡ್ ಮಾಡಬೇಕು ಎಂದು ನಾವು ಹೇಳಿದೆವು. ಪ್ರಣಬ್ ಮುಖರ್ಜಿಯವರಿಗೂ ಸಹ ಈ ಬಗ್ಗೆ ಮನವಿ ಮಾಡಿದ್ದೇನೆ. ಈ ಇಲಾಖೆಯನ್ನು ಹೆಚ್ಚಿನ ರೀತಿಯಲ್ಲಿ ಸ್ಟ್ರೆಂತ್‌ನ್ ಮಾಡುವುದಕ್ಕೆ ಪ್ರೊಪೋಸಲ್ ಸರ್ಕಾರಕ್ಕೆ ಬಂದಾಗ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ನಾವು ಕೊಟ್ಟಿದ್ದೇವೆ. ನಾಲ್ಕು ಮತ್ತು 5 ನೇ ತಾರೀಖು ದೆಹಲಿಯಲ್ಲಿ ಪ್ರಧಾನ ಮಂತ್ರಿಗಳು ಒಂದು ಮೀಟಿಂಗ್ ಕರೆಸಿದ್ದಾರೆ. ನಾನೂ ಕೂಡ ಮುಖ್ಯಮಂತ್ರಿಗಳ ಜೊತೆ ಅಲ್ಲಿಗೆ ಹೋಗುತ್ತಿದ್ದೇನೆ. ಪ್ರೊಪೋಸಲ್ ಕೂಡ ಈಗಾಗಲೇ ಇಟ್ಟಿದ್ದೇವೆ. ಮುಖ್ಯವಾಗಿ ಗಲಾಟೆಯಾಗುವ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಯನ್ನು ಮಾಡಬೇಕು. ಸಂಖ್ಯೆ ಬಲಪಡಿಸಬೇಕಾಗಿದೆ. ಸ್ಪೆಷಲ್ ಟಾಸ್ಕ್ ಫೋರ್ಸ್ ರಚನೆಮಾಡುವುದನ್ನು ಕೂಡ ಗಮನದಲ್ಲಿಟ್ಟುಕೊಂಡಿದ್ದೇವೆ.

ಶ್ರೀ ಬಿ.ಎಸ್. ಯಡೀಯೂರಪ್ಪ : ಮಾನ್ಯ ಅಧ್ಯಕ್ಷರೇ ನ್ಯಾಯಾಂಗ ತನಿಖೆಗೆ ನಾವು ಒತ್ತಾಯ ಮಾಡಿದ್ದೆವು. ಅದು ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇವತ್ತು ಹುಬ್ಬಳಿ ಮತ್ತು ಬೆಳಗಾಂನಲ್ಲಿ ಜನ ಭಯಭೀತರಾಗಿದ್ದಾರೆ. ನ್ಯಾಯಾಂಗ ತನಿಖೆಯಿಂದ ಅನೇಕ ಸಂಗತಿಗಳು ಹೊರಗಡೆ ಬರುವುದಿದೆ. ನೀವು ಜನರ ಕೆಲಸ ಮಾಡುವುದಕ್ಕೆ ಸಿದ್ದರಿಲ್ಲ. ಜನರಿಗೆ ರಕ್ಷಣೆ ಕೊಡುವುದಕ್ಕೆ ನಿಮಗೆ ಕಳಕಳಿ ಇಲ್ಲ ಈ ನೀತಿಯನ್ನು ಪ್ರತಿಭಟನೆ ಮಾಡುತ್ತೇವೆ. ನ್ಯಾಯಾಂಗ ತನಿಖೆಮಾಡುವುದಕ್ಕೆ ನೀವು ಹಿಂದೆ ಮುಂದೆ ಮೋಡುತ್ತಿದ್ದೀರಿ. ನಿಮ್ಮ ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವು ವಾಕ್ ಔಟ್ ಮಾಡುತ್ತಿದ್ದೇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಪ್ರಕಟಣೆ

ಗೈರುಹಾಜರಿಗೆ ಅನುಮತಿ ಕೋರಿಕೆ

ಉಪಾಧ್ಯಕ್ಷರು : ವಿಧಾನ ಸಭೆಯ ಸದಸ್ಯರಾದ ಶ್ರೀ ಎಂ. ಸಿದ್ದಮಾದಯ್ಯನವರು ಬೌರಿಂಗ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ 2 ತಿಂಗಳಿಂದ ಚಿಕಿತ್ಸೆ ಪಡೆಯುತ್ತಿರುವುದರಿಂದ ವಿಧಾನಸಭೆಯ ಸದ... ಉಪವೇಶನಗಳಿಗೆ ಗೈರುಹಾಜರಾಗಲು ಅನುಮತಿ ಕೋರಿ ಪತ್ರ ಬರೆದಿದ್ದಾರೆ. ಶ್ರೀ ಎಂ. ಸಿದ್ದಮಾದಯ್ಯ ಅವರು (ಪ್ರಸಕ್ತ ಅಧಿವೇಶನದ ಉಪವೇಶನಗಳಿಗೆ) ಸದನಕ್ಕೆ ಗೈರುಹಾಜರಾಗಲು ಸದನವು ಅನುಮತಿ ನೀಡುವುದಕ್ಕೆ ಅಪೇಕ್ಷಿಸುತ್ತದೆಯೇ? (ಮಾನ್ಯ ಸದಸ್ಯರಾರೂ ನಿರಾಕರಿಸಲಿಲ್ಲ)

ಉಪಾಧ್ಯಕ್ಷರು : ಗೈರುಹಾಜರಿಗೆ ಅನುಮತಿ ನೀಡಲಾಗಿದೆ.

ಪ್ರಕಟಣೆ-2

ಗೈರುಹಾಜರಿಗೆ ಅನುಮತಿ ಕೋರಿಕೆ

ಉಪಾಧ್ಯಕ್ಷರು : ವಿಧಾನಸಭೆಯ ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅವರು ಒಳರೋಗಿಯಾಗಿ ಚಿಕತ್ಸೆ ಪಡೆಯುತ್ತಿರುವುದರಿಂದ ವಿಧಾನಸಭೆಯ ಸದರಿ ಉಪವೇಶನಗಳಿಗೆ ಗೈರುಹಾಜರಾಗಲು ಅನುಮತಿ ಕೋರಿ ಪತ್ರ ಬರೆದಿರುತ್ತಾರೆ. ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರು ಪ್ರಸಕ್ತ ಅಧಿವೇಶನದ ಉಪವೇಶನಗಳಿಗೆ ಗೈರುಹಾಜರಾಗಲು ಸದನವು ಅನುಮತಿ ನೀಡಲು ಅಪೇಕ್ಷಿಸುತ್ತದೆಯೇ? (ಮಾನ್ಯ ಸದಸ್ಯರಾರೂ ನಿರಾಕರಿಸಲಿಲ್ಲ)

ಉಪಾಧ್ಯಕ್ಷರು : ಗೈರುಹಾಜರಾಗಲು ಮಾನ್ಯ ಸದಸ್ಯರಿಗೆ ಅನುಮತಿ ನೀಡಲಾಗಿದೆ.

ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಕಾಲದ ಚರ್ಚೆ

ರಾಜ್ಯದಲ್ಲಿ ರೇಷ್ಮೆ ಹುಳುಗಳಿಗೆ ಗಂಟುರೋಗ ತಗಲಿರುವುದರಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ 334ರ ನಿಯದ ಮೇರೆಗೆ ಪ್ರಸ್ತಾಪಿಸಬೇಕಾದ ವಿಷಯವನ್ನು ಇಂದು ಪ್ರಸ್ತಾಪ ಮಾಡಬೇಕೆಂದು ನನಗೆ ಅಧ್ಯಕ್ಷರು ತಿಳಿಸಿದ್ದರು. ನೀವು ಅವಕಾಶ ಕೊಡುತ್ತೀರೆಂದು ಕುಳಿತಿದ್ದೇನೆ.

ಉಪಾಧ್ಯಕ್ಷರು : ಇಲ್ಲ ಸೋಮವಾರ ತೆಗೆದುಕೊಳ್ಳುತ್ತೇನೆ. ಈಗ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಕಾಲದ ಚರ್ಚೆ. ಶ್ರೀಯುತ ಡಿ.ಬಿ. ಚಂದ್ರೇಗೌಡರು

ಶ್ರೀ ವಾಟಾಳ್ ನಾಗರಾಜ್ : ಸೋಮವಾರ ತೆಗೆದುಕೊಳ್ಳುತ್ತೀರಲ್ಲ?

ಉಪಾಧ್ಯಕ್ಷರು : ಹೌದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾಧುಸ್ವಾಮಿ ಅವರು ಈ ವಿಷಯವನ್ನು ಇನಿಷಿಯೇಟ್ ಮಾಡುತ್ತಾರೆ.

ಉಪಾಧ್ಯಕ್ಷರು : ಮಾಧುಸ್ವಾಮಿಯವರೆ, ನೀವು ಮಾತನಾಡಿ.

+ ಶ್ರೀ ಜೆ.ಸಿ. ಮಾಧುಸ್ವಾಮಿ : (ಚಿಕ್ಕ ನಾಯಕನಹಳ್ಳಿ) : ಸನ್ಮಾನ್ಯ ಸಭಾಧ್ಯಕ್ಷರೆ ರೈತರು ಕೃಷಿಯನ್ನೆ ನಂಬಿಕೊಂಡಿರುವ ಕಡೆ ಬಹುಶಃ ಕೃಷಿಯಲ್ಲಿ ಯಾವುದೇ ನಿರೀಕ್ಷಿತ ಆದಾಯ ಸಿಕ್ಕದೇ ಹೋದಾಗ ಉಪಕಸಬುಗಳ ಮುಖಾಂತರ ಸ್ವಲ್ಪಮಟ್ಟಿಗೆ ಆದಾಯವನ್ನು ನಿರೀಕ್ಷೆ ಮಾಡುವುದು ಮತ್ತು ಅಂಥ ಉಪಕಸಬುಗಳನ್ನು ವೈಜ್ಞಾನಿಕ ರೀತಿಯಲ್ಲಿ ಅಳವಡಿಸಿಕೊಂಡು ಮುಂದೆ ಹೋಗಬೇಕು ಎಂದು ಆಸೆ ಇಟ್ಟುಕೊಂಡು ಈ ರಾಜ್ಯದಲ್ಲಿ ಕಸಬನ್ನು ಮಾಡುತ್ತಾ ಇದ್ದ ಕಾಲದಲ್ಲಿ ಈ ರೇಷ್ಮೆ ಕೃಷಿ ಕೂಡ ಬಹಳ ಪ್ರಮುಖವಾದ ಸ್ಥಾನವನ್ನು ಅಲಂಕರಿಸಿತ್ತು. ನಾನು ತಿಳಿದಮಟ್ಟಿಗೆ ಭಾರತ ದೇಶದ ಸೇಕಡ 80 ರಷ್ಟು ರೇಷ್ಮೆ ಕರ್ನಾಟಕದಲ್ಲಿ ಉತ್ಪತ್ತಿಯಾಗುತ್ತಿದೆ ಎಂದು ಭಾವಿಸುತ್ತೇನೆ. ಆದರೆ ಈ ಉಪಕಸಬನ್ನು ನಂಬಿಕೊಂಡಿರುವ ರೈತನಿಗೆ ಸುಮಾರು ಮೂರು ನಾಲ್ಕು ತಿಂಗಳಿಂದ ಗಂಡಾಂತರ ಬಂದೊದಗಿದೆ. ಇದಕ್ಕೆ ಅನೇಕ ಕಾರಣಗಳಿವೆ. ಪ್ರಮುಖವಾಗಿ ಎರಡು ಕಾರಣಗಳನ್ನು ನಾನು ನಿಮಗೆ ಹೇಳಬೇಕಾಗಿದೆ. ಒಂದನೇಯದಾಗಿ ಹೊಸದಾಗಿ ಕಾಣಿಸಿಕೊಂಡಿರುವ ಗಂಟು ರೋಗ ಎರಡನೇಯದು ಅಧಿಕಾರಿಗಳ ನಿರ್ಲಕ್ಷ್ಯ ರೈತನಿಗೆ ಮಾಹಿತಿ